ಜನರಲ್ ಆಫ್ ಸಪ್ಲೈಸ್ ಅಂಡ್ ಡಿಸ್ಪೋಸಲ್ಸ್ (ಡಿ.ಜಿ.ಎಸ್.ಅಂಡ್ ಜಿ) ಮತ್ತು ನುರಿತ ಸಂಸ್ಥೆಗಳಾದ ಎಸ್.ಜಿ.ಎಸ್., ಗ್ಲೋಬಲ್ ಕ್ವಾಲಿಟಿ ಇನ್ಸ್‌ಪೆಕ್ಷನ್ ಅಂಡ್ ಸರ್ಟಿಫಿಕೇಷನ್ಸ್ (ಜಿ.ಕ್ಯೂ.ಐ.ಸಿ.) ಸಂಸ್ಥೆಗಳಿಗೆ ಆದೇಶ ಕೊಡಲಾಗಿದೆ.

ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯ ಯಾವುದೇ ಕಾಮಗಾರಿಗಳ ಗುಣಮಟ್ಟವನ್ನು 3ನೇ ತಪಾಸಣೆಗೆ ಜಿ.ಕ್ಯೂ.ಐ.ಸಿ. ಮೈಸೂರು ಇವರಿಂದ ಮಾಡಿಸದಂತೆ ಆದೇಶವಿದ್ದು, ಅದರಂತೆ ನಿರ್ಬಂಧಿಸಲಾಗಿದೆ. ಆದರೆ ಕಪ್ಪುಪಟ್ಟಿಗೆ ಸೇರಿಸುವ ಬಗ್ಗೆ ಸದರಿ ಆದೇಶದಲ್ಲಿ ಉಲ್ಲೇಖವಿರುವುದಿಲ್ಲ. ಆದುದರಿಂದ ಈ ಸಂಸ್ಥೆಯನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಪ್ಪು ಪಟ್ಟಿಗೆ ಸೇರಿಸಿರುವುದಿಲ್ಲ.

ಈ) ಈ ಹಿಂದೆ ಟರ್ನ್‌ಕೀ ಆಧಾರದಲ್ಲಿ ಕರೆದಿದ್ದ ಟೆಂಡರ್‌ನಲ್ಲಿ ಸದರಿ ಅಂಶ ಇದ್ದು, ಇದಕ್ಕೆ ಟೆಂಡರ್‌ದಾರರಿಂದ ಸೂಕ್ತ ಪ್ರತಿಕ್ರಿಯೆ ಬಾರದ ಕಾರಣ, ಈ ಟರ್ನ್‌ಕೀ ಪದ್ದತಿಯ ಟೆಂಡರ್ ರದ್ದುಪಡಿಸಿ ಕೆಲವು ತಿದ್ದುಪಡಿಗಳೊಂದಿಗೆ ಪ್ರತ್ಯೇಕ ಟೆಂಡರ್ ಕರೆದು, ಪಂಪ್‌ಸೆಟ್ ತಯಾರಿಕಾ ಕಂಪನಿಯವರು ಹೆಚ್ಚಿನ ಸಂಖ್ಯೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿ, ಸ್ಪರ್ಧಾತ್ಮಕ ದರ ಪಡೆಯಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಷರತ್ತನ್ನು ಸಡಿಲಗೊಳಿಸಲಾಗಿರುತ್ತದೆ.

ರಾಜ್ಯದಲ್ಲಿ ಗಣಕೀಕೃತ ಕಾರ್ಡ್‌ಗಳ ವಿತರಣೆ ಸಮರ್ಪಕ ಆಗದೇ ಇರುವುದು

226 (602) ಶ್ರೀ ಸಿದ್ದು ಸವದಿ (ತೇರದಾಳ್) ಮಾನ್ಯ ಇಂಧನ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೆರದಾಳ ಮತಕ್ಷೇತ್ರದಲ್ಲಿ ಇರುವ ರೇಷನ್ ಕಾರ್ಡ್‌ಗಳ ಸಂಖ್ಯೆ ಎಷ್ಟು; (ಯಾವ ತರಹವುಗಳ ಸಂಪೂರ್ಣ ವಿವರ ಕೊಡುವುದು)

ಆ) ಎಲ್ಲಾ ಕಾರ್ಡ್‌ದಾರರಿಗೆ ಗಣಕೀಕೃತ ಕಾರ್ಡ್‌ಗಳನ್ನು ವಿತರಿಸಲಾಗಿದೆಯೇ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು; ಯಾವಾಗ ಸಂಪೂರ್ಣವಾಗಿ ಗಣಕೀಕೃತ ಕಾರ್ಡುಗಳನ್ನು ವಿತರಿಸಲಾಗುವುದು;

ಈ) ಇನ್ನೂ ಕೆಲ ಬಡ ಕುಡುಂಬಗಳು ಅಕ್ಷಯ ಕಾರ್ಡ್‌ದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಕುಟುಂಬಗಳ ಸಂಖ್ಯೆ ಎಷ್ಟು; ಅವರಿಗೆ ಯಾವಾಗ ಕಾರ್ಡ್ ಕೊಡಲಾಗುವುದು;

ಉ) ಸೀಮೆಎಣ್ಣೆಯನ್ನು ಯಾವ ಕಾರ್ಡುದಾರರಿಗೆ ಎಷ್ಟು ಕೊಡಲಾಗುವುದು ಪ್ರತಿ ತಿಂಗಳು ವಿತರಣೆಯಲ್ಲಿ ವ್ಯತ್ಯಾಸವಾಗಲು ಕಾರಣಗಳೇನು?

ಕು॥ ಶೋಭಾ ಕರಂದ್ಲಾಜೆ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ತೆರದಾಳ ಮತಕ್ಷೇತ್ರದಲ್ಲಿ ಇರುವ ಪಡಿತರ ಚೀಟಿಗಳ ಸಂಖ್ಯೆ ಈ ಕೆಳಕಂಡಂತಿದೆ:

ಪ್ರದೇಶ	ಎಎವೈ	ಬಿಪಿಎಲ್	ಎಪಿಎಲ್	ಒಟ್ಟು
ಪಡಿತರ	1608	16789	7110	23899
ಪಟ್ಟಣ	1418	11244	4288	15532
ಗ್ರಾಮೀಣ	2838	17719	7701	25420
ಒಟ್ಟು	5864	45752	19099	64851

ಆ) ಹೌದು. ಎಲ್ಲಾ ಕಾರ್ಡ್‌ಗಳ ಮಾಹಿತಿ ಗಣಕೀಕೃತ ಹೊಂದಿದೆ. ಆದರೆ, ತಾತ್ಕಾಲಿಕ ಕಾರ್ಡ್‌ಗಳಲ್ಲಿ ಭಾವಚಿತ್ರ ಇರುವುದಿಲ್ಲ ಮತ್ತು ಲ್ಯಾಮಿನೇಟ್ ಮಾಡಲಾಗಿರುವುದಿಲ್ಲ.

ಇ) ಅಸಂಖ್ಯಾತ ಅನರ್ಹ ಪಡಿತರ ಚೀಟಿಗಳು ಉಪಯೋಗದಲ್ಲಿ ಇರುವುದರಿಂದ ಅನರ್ಹ ಪಡಿತರ ಚೀಟಿಗಳನ್ನು ಹಾಗೂ ಪಡಿತರ ಚೀಟಿ ಇಲ್ಲದೆ ಇರುವ ಕುಟುಂಬಗಳನ್ನು ಗುರುತಿಸುವ ಪ್ರಕ್ರಿಯೆ ರಾಜ್ಯಾದ್ಯಾಂತ ಚಾಲನೆಯಲ್ಲಿರುತ್ತದೆ. ಈ ಕಾರ್ಯ ಮುಗಿದ ನಂತರ ಅರ್ಹ ಕುಟುಂಬಗಳಿಗೆ ಖಾಯಂ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಈ) ಬಹಳ ಸಂಖ್ಯೆಯ ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ (ಬಿಪಿಎಲ್) ಪಡಿತರ ಚೀಟಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಬಿಪಿಎಲ್ ಪಡಿತರ ಚೀಟಿಗಳಿಂದ ವಂಚಿತರಾಗಿರುವ ಕುಟುಂಬದ ಮಾಹಿತಿ ಸಧ್ಯಕ್ಕೆ ಲಭ್ಯವಿರುವುದಿಲ್ಲ. ಅಸಂಖ್ಯಾತ ಅನರ್ಹ ಪಡಿತರ ಚೀಟಿಗಳು ಉಪಯೋಗದಲ್ಲಿ ಇರುವುದರಿಂದ ಅನರ್ಹ ಪಡಿತರ ಚೀಟಿಗಳನ್ನು ಹಾಗೂ ಪಡಿತರ ಚೀಟಿ ಇಲ್ಲದೆ ಇರುವ ಕುಟುಂಬಗಳನ್ನು ಗುರುತಿಸುವ ಪ್ರಕ್ರಿಯೆ ರಾಜ್ಯಾದ್ಯಾಂತ ಚಾಲನೆಯಲ್ಲಿರುತ್ತದೆ. ಈ ಪ್ರಕ್ರಿಯೆ ಮುಗಿದ ನಂತರ ಅರ್ಹ ಬಿಪಿಎಲ್ ಕುಟುಂಬಗಳಿಗೆ ಪಡಿತರ ಚೀಟಿ ನೀಡಲಾಗುತ್ತದೆ.

ಉ) ಪಟ್ಟಣ ಪ್ರದೇಶದ ಅನಿಲ ರಹಿತ ಪಡಿತರ ಚೀಟಿಗಳಿಗೆ ಪ್ರತಿ ತಿಂಗಳಿಗೆ 5 ಲೀಟರ್‌ನಂತೆ ಹಾಗೂ ಗ್ರಾಮಾಂತರ ಪ್ರದೇಶದ ಅನಿಲ ರಹಿತ ಪಡಿತರ

ಚೀಟಿಗಳಿಗೆ ಪ್ರತಿ ತಿಂಗಳು 3 ಲೀಟರ್‌ನಂತೆ ವಿತರಿಸಲಾಗಿದೆ. ಪ್ರತಿ- ಪಡಿತರ ಚೀಟಿಗೆ, ನೀಡುವ ಸೀಮೆಎಣ್ಣೆ ಪ್ರಮಾಣದಲ್ಲಿ ವ್ಯತ್ಯಾಸ ಮಾಡಲಾಗುತ್ತಿಲ್ಲ.

ರಾಜ್ಯದಲ್ಲಿ ಗಣಕೀಕೃತ ಕಾರ್ಡ್‌ಗಳ ವಿತರಣೆ ಸಮರ್ಪಣೆ ಆಗದೆ ಇರುವುದು

227 (553) ಶ್ರೀ ಸುರೇಶ್‌ಗೌಡ (ನಾಗಮಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಗ್ರಾಮದ 10 ಹಾಸಿಗೆಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) 2001ರಲ್ಲಿಯೇ ಈ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುವುದು ನಿಜವಲ್ಲವೇ;

ಇ) ಕೊಪ್ಪ ಗ್ರಾಮವು 64 ಗ್ರಾಮಗಳಿಗೆ ಮದ್ಯದ ಕೇಂದ್ರ ಸ್ಥಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿಸಲು ವಿಳಂಬ ನೀತಿ ಅನುಸರಿಸಲು ಕಾರಣಗಳೇನು;

ಉ) ಮಂಡ್ಯ ಜಿಲ್ಲೆಯ ನಿಯಮಾವಳಿಗೆ ಲಭ್ಯವಿಲ್ಲದ ಪ್ರಸ್ತಾವನೆಯಿಲ್ಲದ ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿರುವುದನ್ನು ಸರ್ಕಾರ ಗಮನಿಸಿದೆಯೇ;

ಊ) ಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ತಿರಸ್ಕರಿಸಲಾಗಿದೆಯೇ; ಹಾಗಿದ್ದಲ್ಲಿ, ಕಾರಣಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ), ಆ), ಇ), ಈ), ಉ), ಮತ್ತು ಊ) ಈ ಹಿಂದೆ ಇದ್ದಂತಹ ಪ್ರಸ್ತಾವನೆಯನ್ನು ಪರಿಶೀಲಿಸಿ ಮಾರ್ಗಸೂಚಿಗಳನ್ವಯ ಮೇಲ್ದರ್ಜೆಗೇರಿಸಲು ಅವಕಾಶವಿಲ್ಲವೆಂದು ತಿರಸ್ಕರಿಸಲಾಗಿದೆ. ಪ್ರಸ್ತುತ ಅಂತಹ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.

ಮುಂದುವರೆದು, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ